<u>ಪ್ರಥಮ ದರ್ಜೆಯ ನ್ಯಾ ಯಿಕ ದಂಡಾಧಿಕಾರಿಗಳ ನ್ಯಾ ಯಾಲಯ, ಸೇಡಂ.</u>

ಸಿ.ಸಿ. ನಂಃ 582/2018 ಸಿಡಬ್ಲೂ: 1 ಪಿಡಬ್ಲೂ: 1

ಪ್ರಮಾಣವಚನ ದಿಃ 03-09-2025
ಬೋಧಿಸಲಾಯಿತು

ಹೆಸರು : ಸುಶೀಲಮ್ಮ

ತಂದೆ ಹೆಸರು : ಭದ್ರಪ್ಪ ಹುಗಾರ್

ವಯಸ್ಸು : 60 ವರ್ಷ

ಉದ್ಯೋಗ : ಮನೆ ಕೆಲಸ

ವಾಸಸ್ಥಳ : ಕೋಡ್ಲಾ

:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ದೂರಾಗಿದ್ದು ಸಾಕ್ಷಿಯು ಸದರಿ ದಾಖಲಾತಿ ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-1 ಎಂದು ಗುರುತಿಸಲಾಗಿದೆ ಹಾಗು ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಆರೋಪಿತರು ಗೊತ್ತು. 1 ನೇ ಆರೋಪಿತನು ನನ್ನ ಅಣ್ಣನ ಮಗ, ಎಲ್ಲಾ ಆರೋಪಿತರು ನನ್ನ ಸಂಬಂಧಿಕರು. 2 ನೇ ಆರೋಪಿತ ನನ್ನ ಅಣ್ಣನ ಹೆಂಡತಿ, 3 ನೇ ಆರೋಪಿ ನನ್ನ ಅಣ್ಣನ ಮಗಳು, 4 ನೇ ಆರೋಪಿ ನನ್ನ ತಮ್ಮನ ಮಗಳು, 5 ರಿಂದ 8 ನೇ ಆರೋಪಿತರು ಅಕ್ಕ ಪಕ್ಕದವರು.

ಸುಮಾರು 4 ರಿಂದ 5 ವರ್ಷಗಳ ಹಿಂದೆ ಜಮೀನಿನಲ್ಲಿ ಪಾಲು ಬೇಕು ಎಂದು ದಾವೆ ಸಲ್ಲಿಸಿದಾಗ ಆರೋಪಿತರೆಲ್ಲಾರು ನನಗೆ 08-00 ಗಂಟೆ ಸುಮಾರಿಗೆ ನನಗೆ ಅವಾಚ್ಯ ಶಬ್ದಗಳಿಂದ ಬೈದು ಹೊಡೆ ಬಡೆ ಮಾಡಿರುತ್ತಾರೆ. ಆರೋಪಿತರು ನನಗೆ ಬೆನ್ನಿಗೆ ,ಕೈಗೆ ಹೊಡೆದು ಕೈಹಿಡಿದು ಎಳೆದಾಡಿರುತ್ತಾರೆ. ಆಗ ಅಕ್ಕ ಪಕ್ಕದವರು ಬಂದು ಜಗಳ ಬಿಡಿಸಿರುತ್ತಾರೆ. ಈ ಬಗ್ಗೆ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)

<u>ವಾಟೀಸವಾಲುಃ</u> ಮಾನ್ಯ ಸ.ಸ.ಅ ರವರಿಂದ:

ಸರ್ವೆ ನಂ. 790/1, 955, 958, 66/2 ಒಟ್ಟು 32 ಎಕರೆ ಜಮೀನಿಗೆ ಸಂಬಂಧಿಸಿದಂತೆ ನ್ಯಾಯಾಲಯದಿಂದ ಎಲ್ಲಾರಿಗೂ ಭಾಗ ಆಗಬೇಕು ಎಂದು ಆದೇಶ ಆಗಿತ್ತು ಎಂದರೆ ಸರಿ. ದಿ.26-06-2018 ರಂದು ರಾತ್ರಿ 09-00 ಗಂಟೆ ಸುಮಾರಿಗೆ ನಾನು ಮನೆಯಲ್ಲಿದ್ದಾಗ 1 ರಿಂದ 4 ನೇ ಆರೋಪಿತರು ಮನೆಗೆ ಬಂದು ಅಕ್ರಮ ಕೂಟ ರಚಿಸಿಕೊಂಡು ಬಂದು ಯೇ ರಂಡಿ ಸುಶೀಲ ಮನೆಯ ಹೊರಗಡೆ ಬಾ ನೀನು ಹೋಲದಲ್ಲಿ ಪಾಲು ಕೇಳುತ್ತೀಯಾ ಅಂತಾ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. 2 ರಿಂದ 4 ನೇ ಆರೋಪಿತರು ಕೂಡಿ ಈ ರಂಡಿಗೆ ಬಿಡಬೇಡ ರ್ರಿ ಅಂತಾ ಜೀವ ತೆಗೆಯಿರಿ ಮತ್ತು ಸಾಯಿಸಿಬಿಡಿರಿ ಹಾಗೂ ಇವರ ಪಾಲಿಗೆ ಬಂದಂತ ಎಲ್ಲಾ ಜಮೀನು ನಮಗೆ ಬರುತ್ತದೆ ಎಂದು ಹೇಳಿ ಕೈ ಹಿಡಿದು ಎಳೆದಾಡಿ ಲೈಂಗಿಕ ಕಿರುಕುಳ ನಿಡಿದ್ದಾರೆ ಎಂದರೆ ಸರಿ. ಆಗ ಚಾ ಸಾ 4 ಮತ್ತು 5 ರವರ ಬಂದು ಜಗಳ ಬಿಡಿಸಿರುತ್ತಾರೆ.

ವಾಟೀಸವಾಲುಃ ಆರೋಪಿ ಪರ ಶ್ರೀ ಎಸ್ ಆರ್ ಪಿ ವಕೀಲರಿಂದ:

ನನ್ನ ಮದುವೆ ಆಗಿಲ್ಲ. ನಾನು ಶರಣಯ್ಯ ಮಲ್ಲಯ್ಯ ಗುಟ್ಟ ಗುಡಿಯಲ್ಲಿ ವಾಸಿಸುತ್ತಿದ್ದೇನೆ ಎಂದರೆ ಸರಿ. ನಾನು ಸನ್ 2000 ಸಾಲಿನಲ್ಲಿ ತಿಪ್ಪಣ್ಣ, ನಾರಾಯಣ ಮತ್ತು ಸಿದ್ದಣ್ಣ ರವರಿಗೆ ಪಾಲು ಮಾಡಿಕೊಟ್ಟಿದ್ದು ಎಂದರೆ ಸರಿಯಿಲ್ಲ. ಸನ್ 2018 ರಲ್ಲಿ ನಾಗರೆಡ್ಡಿ ಆರಕಟ್ಟಿ ರವರ ಮನೆಯಲ್ಲಿ ಬಾಡಿಗೆ ಮೇಲೆ ಇದ್ದೇನು. ನಾನು ಪಂಚನಾಮೆಗೆ ತೋರಿಸಿರುವ ನಾಗರೆಡ್ಡಿ ಆರಕಟ್ಟಿರವರಿಗೆ ಸಂಬಂದಿಸಿಲ್ಲ ಎಂದರೆ ಸಾಕ್ಷಿಯು ಮೊದಲು ಲಗಳಿ ರವರ ಮನೆಯಲ್ಲಿ ಇದ್ದೆ ಈಗ ನಾಗರೆಡ್ಡಿರವರ ಮನೆಯಲ್ಲಿ ಇರುತ್ತೇನೆ ಎಂದು ನುಡಿಯುತ್ತಾರೆ. ನಾಗರೆಡ್ಡಿ ಆರಕಟ್ಟಿ ರವರ ಮನೆಯ ಚಕ್ಕು ಬಂದಿ ನನಗೆ ಹೇಳಲು ಬರುವುದಿಲ್ಲ. ನಾನು ನಾಗರೆಡ್ಡಿ ಆರಕಟ್ಟಿ ರವರ ಮನೆಯಲ್ಲಿ ಇದ್ದಾಗ ಆರೋಪಿತರು ಬಂದು ಜಗಳ ಮಾಡಿದ್ದರು ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಿಲ್ಲ. ಪಂಚನಾಮೆಯಲ್ಲಿ ತೋರಿಸಿರುವ ಚಕ್ಕು ಬಂದಿಗೆ ಹಾಗೂ ನಾನು ವಾಸಿಸುತ್ತಿರುವ ಮನೆಯ ಚಕ್ಕು ಬಂದಿಗೆ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಿಲ್ಲ. ನಾನು ಸಲ್ಲಿಸಿದ ದಾವೆ ಡಿಕ್ರಿಯಾಗಿದೆ ಎಂದರೆ ಸರಿ. 1 ನೇ ಆರೋಪಿತನು ನನಗೆ ಲೈಂಗಿಕ ಕಿರುಕುಳ ನೀಡಿರುಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದೇ ರೀತಿ ಬೇರೆ ಆರೋಪಿತರು ನನಗೆ ಹೊಡೆ ಬಗಡೆ ಮಾಡುತ್ತಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸಾಕ್ಷಿಯು ಬಂದು ಎಲ್ಲಾರು ಬಂದು ನನಗೆ ಹೊಡೆದಿದ್ದಾರೆ ಎಂದು

ನಡಿಯುತ್ತಾರೆ. ಯಾರು ಬಂದು ಜಗಳ ಬಿಡಿಸಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ. 5 ರಿಂದ 8 ರವರ ನಮ್ಮ ಆಸ್ತಿಗೆ ಹಾಗೂ ಕುಟುಂಬಕ್ಕೆಹ ಯಾವುದೇಸಂಬಂದ ಇಲ್ಲ ಎಂದರೆ ಸಾಕ್ಷಿಯು ಅವರು ನನಗೆ ಬಹಳಬೆಐದ್ದಾರೆ ಎಂದು ನಡಿಯುತ್ತಾರೆ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ನೀವೇನಾದರು ತಿಳಿದುಕೊಳ್ಳಿರಿ ಅಂತಾ ನುಡಿಯುತ್ತಾರೆ. ನಾನು ಆರೋಪಿತರಿಗೆ ತೊಂದರೆ ಕೊಡುವದಕೊಸ್ದರ ಸುಳ್ಳು ಪ್ರಕರಣವನ್ನು ಸಲ್ಲಿಸಿ ಸುಳ್ಳು ಸಾಕ್ಷಿನುಯಡಿಯುತ್ತಿದ್ದೇನ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ. ಇದೆ.

ಪ್ರ. ದ. ನ್ಯಾ. ದಂ. ಸೇಡಂ.